## ಆಸಿನ್‌ಗೆ ಲಾಭ

ಬಾಲಿವುಡ್‌ನಲ್ಲಿ ಕುಳಿತು ಕಾದದ್ದಕ್ಕೆ ಆಸಿನ್‌ಗೆ ಕೊನೆಗೂ ಫಲ ಲಭಿಸಿದೆ. ಅಮೀರ್ ಖಾನ್ ಜತೆ ಸೂಪರ್‌ಹಿಟ್ 'ಗಜನಿ'ಯ ಬಳಿಕ ದೊಡ್ಡ ಬ್ಯಾನರ್ ಚಿತ್ರಗಳು ಸಿಗದೆ ಒದ್ದಾಡುತ್ತಿದ್ದ ಆಸಿನ್, ಇದೀಗ ಬಿಗ್‌ಬಜೆಟ್ ನಿರ್ದೇಶಕ ಅಶುತೋಷ್ ಗೋವರಿಕರ್ ಅವರ ಹೊಸ ಐತಿಹಾಸಿಕ ಚಿತ್ರ 'ಖೇಲೇ ಹಂ ಜೀ ಜಾನ್ ಸೆ'ಗೆ ನಾಯಕಿಯಾಗಿ ಆಯ್ಕೆ ಆಗಿದ್ದಾಳೆ. ಗೋವರಿಕರ್‌ನನ್ನು ಭೇಟಿಯಾಗಿದ್ದ ಆಸಿನ್ ಸುದ್ದಿ ತಿಳಿದು ಕುಪ್ಪಳಿಸಿದಳಂತೆ! 'ಕಥೆ ಹೇಳ್ತೇನೆ' ಅಂದಾಗ, 'ಬೇಡ ಸಾರ್. ನಿಮ್ಮ ಚಿತ್ರದಲ್ಲಿ ನಟಿಸುವುದೇ ನನ್ನ ಸೌಭಾಗ್ಯ' ಎಂದಳಂತೆ!

ಗೋವರಿಕರ್‌ನ ಈ ಹೊಸ ಚಿತ್ರ 'ಚಿತ್ತಗಾಂಗ್ ಬಂಡಾಯ'ದ ಹಿನ್ನೆಲೆಯ ಕಥೆ ಹೊಂದಿದೆ. ಬಂಡಾಯ ನಾಯಕ ಸೂರ್ಜ್ಯಾ ಸಿಂಗ್ ಪಾತ್ರವನ್ನು ಅಭಿಷೇಕ್ ಬಚ್ಚನ್ ನಿರ್ವಹಿಸಲಿದ್ದಾನಂತೆ. ಮೊದಲ ಸುತ್ತಿನಲ್ಲಿ ಹೀರೋಯಿನ್ ಪಾತ್ರವನ್ನು ಐಶ್ವರ್ಯ ರೈ ಮಾಡೋದು ಎಂದಿತ್ತು. ಆದರೆ ಈಗ ಐಶ್ ಬದಲಿಗೆ ಆಸಿನ್ ಆಯ್ಕೆ ಆಗಿದ್ದಾಳೆ. ಆಸಿನ್ ಮಟ್ಟಿಗೆ ಬಾಲಿವುಡ್‌ನಲ್ಲಿ ಇದೊಂದು ಮಹತ್ವದ ಜಂಪ್! ಈಗಾಗಲೆ ಲಗಾನ್, ಸ್ವದೇಶ್, ಜೋಧಾ ಅಕ್ಬರ್ ಮುಂತಾದ ಭಾರೀ ಬಜೆಟ್‌ನ ಪೀರಿಯಡ್ ಚಿತ್ರಗಳನ್ನು ನಿರ್ಮಿಸಿ ಪಳಗಿರುವ ಗೋವರಿಕರ್ ಈಗ ಮತ್ತೊಂದು ಪೀರಿಯಡ್ ಚಿತ್ರಕ್ಕೆ ಕೈ ಹಾಕಿದ್ದಾನೆ. ಗೆದ್ದರೂ, ಬಿದ್ದರೂ ಆಸಿನ್‌ಗೆ ಲಾಭವೇ!



## ನಟನೆಗೆ ಶಿನೆ ಅಹುಜಾ?



ಅತ್ಯಾಚಾರ ಆರೋಪದಲ್ಲಿ ಮೂರು ತಿಂಗಳು ಜೈಲು ಸೇರಿದ ಶಿನೆ  ಈಗ ಜಾಮೀನು ಪಡೆದಿದ್ದಾನೆ. ಸುದ್ದಿ ತಿಳಿದು ಆತನ ನಿರ್ಮಾಪಕರು ಖುಷಿಯಾಗಿದ್ದಾರೆ. ಜೈಲು ಸೇರುವ ಮುನ್ನ ಸುಮಾರು ಆರು ಚಿತ್ರಗಳು ಅಹುಜಾ ಕೈಯಲ್ಲಿದ್ದವು. ಅದರಲ್ಲಿ ಪ್ರೀತಿಶ್ ನಂದಿ ನಿರ್ದೇಶನದ 'ಆ್ಯಕ್ಸಿಡೆಂಟ್' ಚಿತ್ರ ಕೂಡಾ ಇತ್ತು. ಯಾರಿಗೂ ಗೊತ್ತಾಗದಂತೆ ಆ್ಯಕ್ಸಿಡೆಂಟ್ ಆಗಿಯೇ ಹೋಯ್ತು–ಚಿತ್ರಗಳೆಲ್ಲ ಅರ್ಧದಲ್ಲೇ ನಿಂತವು.

ಸುಧೀರ್ ಮಿಶ್ರಾ, ಅನುರಾಗ್ ಬಸು, ಪ್ರೀತಿಶ್ ನಂದಿ, ಕುಣಾಲ್ ಶಿವದಾಸನಿ ಮುಂತಾದ ಘಟಾನುಘಟಿ ನಿರ್ದೇಶಕರೆಲ್ಲ ಅಹುಜಾನಿಗೆ ಜಾಮೀನು ಸಿಕ್ಕಿದ್ದನ್ನು ಸ್ವಾಗತಿಸಿದ್ದಾರೆ. 'ಆತ ಸಭ್ಯ ನಟ. ಹೀಗೇಕಾಯ್ತೊ ಗೊತ್ತಿಲ್ಲ' ಎನ್ನುವುದು ಅವರು ಇವತ್ತಿಗೂ ಹೇಳುವ ಮಾತು. ಮಹೇಶ್ ಭಟ್ ಮಾತ್ರ, 'ರೇಪ್ ಮುಂತಾದ ದೊಡ್ಡ ವಿಷಯಗಳ ಬಗ್ಗೆ ನಾನು ಮಾತನಾಡೋದಿಲ್ಲ. ಇದರಿಂದ ಆ ಪ್ರಕರಣದಲ್ಲಿ ಒಳಗೊಂಡ ಎಲ್ಲರಿಗೂ ತೊಂದರೆಯೇ ಹೆಚ್ಚು. ನನ್ನ ಕಾಮೆಂಟ್ಸ್ ಬೇಡ ಪ್ಲೀಸ್' ಎಂದಿದ್ದಾರೆ! 'ರೇಪ್ ಆಗಿದ್ದರೆ ಕೆಲಸದಾಕೆ ಪರಚಿದ ಗಾಯಗಳು ಅಹುಜಾ ಮೈ ಮೇಲೆ ಇರಬೇಕಿತ್ತು. ಅದೇನೂ ಇಲ್ಲ ಎಂದರೆ ಇದು ಪರಸ್ಪರ ಸಮ್ಮತಿಯಿಂದ ನಡೆದದ್ದು ಅಲ್ವೆ?' ಎಂದು ಪ್ರಶ್ನಿಸಿ ಅಹುಜಾನ ವಕೀಲರು ಮೊದಲ ಹಂತದಲ್ಲಿ ಗೆದ್ದಿದ್ದಾರೆ. ಮುಂದೇನಾಗುತ್ತೋ ನೋಡಬೇಕು.

## ಬಿಂದಾಸ್ ಮಂದಿರಾ!

ಟಿ.ವಿ ಚಾನೆಲ್‌ನಿಂದ ಸಿನಿಮಾಗೆ ಜಿಗಿದು, ಅಲ್ಲಿಂದ ಕ್ರಿಕೆಟ್ ಮೈದಾನಕ್ಕೆ ಲಗ್ಗೆ ಇಟ್ಟು ಸದಾ ಸುದ್ದಿಯಲ್ಲಿರುವ ಮಂದಿರಾ ಬೇಡಿ, ಇದೀಗ ಫ್ಯಾಷನ್ ಷೋ ಮೂಲಕ ಮತ್ತಷ್ಟು ಸುದ್ದಿಗೆ ಗ್ರಾಸವಾಗಿದ್ದಾಳೆ. ಇತ್ತೀಚೆಗೆ ಕೋಲ್ಕತ್ತಾದಲ್ಲಿ ನಡೆದ ಫ್ಯಾಷನ್ ಷೋ ನಲ್ಲಿ ವೃತ್ತಿಪರ ಮಾಡೆಲ್‌ಗಳೂ ನಾಚಿ ನೀರಾಗುವಂತೆ ಬಹುತೇಕ ತೆರೆದೆದೆಯ ಬಿಂದಾಸ್ ಡ್ರೆಸ್ ಧರಿಸಿ ರ್‍ಯಾಂಪಿಂಗ್ ಮಾಡಿದ ಮಂದಿರಾಳನ್ನು ನೋಡಿ ಪ್ರೇಕ್ಷಕರು ದಂಗಾದರಂತೆ!



## ಬಿಗ್ ಬಾಸ್-3



ಭಾರೀ ಸುದ್ದಿ ಮಾಡಿರುವ 'ಬಿಗ್ ಬಾಸ್' ಟಿವಿ ಷೋ ಮೂರನೆ ಭಾಗ ಮುಂದಿನ ತಿಂಗಳಿಂದ ಶುರು ಆಗಲಿದೆ. ಸದ್ಯ ಗೆಳೆಯ ಅಮರ್ ಸಿಂಗ್ ಸಲುವಾಗಿ ಹಾಂಕಾಂಗ್‌ನಲ್ಲೇ ವಾಸಿಸುತ್ತಿರುವ ಅಮಿತಾಭ್ ಬಚ್ಚನ್ ವಾರಕ್ಕೆ ಒಮ್ಮೆ ಶೂಟಿಂಗಿಗೆ ಮುಂಬೈಗೆ ಬರುತ್ತಿದ್ದಾರೆ. ಅಮಿತಾಭ್ ಆ್ಯಂಕರಿಂಗ್ ಇರುವ ಮೂರನೇ ಭಾಗದಲ್ಲಿ 'ಸೆಕ್ಸ್ ಬಾಂಬ್' ಶೆರ್ಲಿನ್ ಚೋಪ್ರಾ ಮತ್ತು ಕಮಾಲ್ ಖಾನ್ ಇರೋದು ಖಾತ್ರಿಯಾಗಿದೆ. ಹೊಸ ಸುದ್ದಿ ಏನೆಂದರೆ, ರಾಜೇಶ್ ಖನ್ನಾ ಮತ್ತು ಬಾಬಾ ರಾಮ್‌ದೇವ್ ಅವರೂ ಈ ಷೋನಲ್ಲಿ ಭಾಗವಹಿಸಲಿದ್ದಾರಂತೆ! ಹಾಗೇನಾದರೂ ಆದರೆ ಇದು ಭಾರತೀಯ ಕಿರುತೆರೆಯ 'ಅತಿ ದೊಡ್ಡ ಷೋ' ಎನ್ನಲಡ್ಡಿಯಿಲ್ಲ.

–ಬಿಂದು